# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**
ನೊಂದಣಿ ಸಂಖ್ಯೆ :

## ಪಿಎಸ್ಐ ಪತ್ರಿಕೆ – 1

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಪ್ರಶ್ನೆಗಳು**
**ಅಂಕಗಳು : 100**

ಹೆಸರು :

ಮೊಬೈಲ್ ನಂ :

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. "ಆತ್ಮನಿರ್ಭರ ಭಾರತ" ಯೋಜನೆಯ ಕುರಿತು ಚರ್ಚಿಸಿರಿ

ಅಥವಾ

2. ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ಕುರಿತು ವಿಮರ್ಶಾತ್ಮಕ ಚರ್ಚಿಸಿರಿ.

ಅಥವಾ

3. "ಎಲ್ಲರಿಗೂ ಶಿಕ್ಷಣ  ಆಂದೋಲನ" ಎಂಬುದರ ಸತ್ಯ / ಮಿಥ್ಯ  ಕುರಿತು ಚರ್ಚಿಸಿರಿ.

ಅಥವಾ

4. "ಸಾರ್ಕ್"ದಲ್ಲಿ ಭಾರತದ ಸ್ಥಾನ ಹಾಗೂ ಸಾರ್ಕ್‌ನ ಸಾಧನೆಗಳನ್ನು ಚರ್ಚಿಸಿರಿ.

ಅಥವಾ

5. ಕಪ್ಪು ಹಣದ ಪರಿಣಾಮಗಳು ಹಾಗೂ ಭಾರತ ಎದುರಿಸುತ್ತಿರುವ ಸವಾಲಗಳು ಕುರಿತು ಚರ್ಚಿಸಿರಿ.

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಸಾಂಸ್ಕೃತಿಕ ವೈವಿಧ್ಯತೆಯು ಭಾರತದ ವೈವಿಧ್ಯೆತೆಯ ಇನ್ನೊಂದು ಮೂಲವಾಗಿದೆ. ಭಾರತೀಯರ ಸಾಮಾಜಿಕ ಅಭ್ಯಾಸಗಳಲ್ಲಿ ಸಾಕಷ್ಟು ವೈವಿಧ್ಯತೆಯಿದೆ. ರಾಜ್ಯದಿಂದ ರಾಜ್ಯಕ್ಕೆ ಸಾಂಸ್ಕೃತಿಕ ವ್ಯತ್ಯಾಸಗಳಿವೆ. ಜನರ ಜನಾಂಗೀಯ ಮೂಲಗಳು, ಸಂಸ್ಕೃತಿ, ಜೀವನ ವಿಧಾನಗಳು ವರ್ತನ ಮಾದರಿಗಳು, ನಂಬಿಕೆಗಳು, ನೈತಿಕ ನಿಯಮಗಳು, ಆಹಾರ ಅಭ್ಯಾಸಗಳು, ಉಡುಪು, ಮೌಲ್ಯಗಳು, ಸಾಮಾಜಿಕ ನಿಯಮಗಳು, ಸಾಮಾಜಿಕ–ಧಾರ್ಮಿಕ ಪದ್ಧತಿಗಳು ಮತ್ತು ಮತಾಚರಣೆಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಡಾ. ಆರ್.ಕೆ. ಮುಖರ್ಜಿಯವರು ಹೇಳಿರುವಂತೆ, "ಭಾರತವು ಪಂಥಗಳು ಮತ್ತು ಪದ್ಧತಿಗಳು, ಮತಗಳು ಮತ್ತು ಸಂಸ್ಕೃತಿ, ನಂಬಿಕೆಗಳು ಮತ್ತು ಭಾಷೆಗಳು ಜನಾಂಗೀಯ ಪ್ರಕಾರಗಳು ಮತ್ತು ಸಾಮಾಜಿಕ ವ್ಯವಸ್ಥೆಗಳನ್ನೊಳಗೊಂಡ ವಸ್ತು ಸಂಗ್ರಹಾಲಯವಾಗಿದೆ". ಇದಲ್ಲದೇ ನಿರ್ದಿಷ್ಟ ಸಮುದಾಯಗಳು ಮತ್ತು ಪ್ರಾಂತಗಳೂ ಕೂಡ ಸಾಂಸ್ಕೃತಿಕ ಅನನ್ಯತೆ ಹೊಂದಿವೆ.

ಜನಾಂಗೀಯ ವೈವಿಧ್ಯತೆಯು ವಿಭನ್ನ ಜನಾಂಗ, ಸಾಂಸ್ಕೃತಿಕ ಮತ್ತು ಭಾಷಾವಾರು ವೈವಿಧ್ಯತೆಗಳನ್ನೊಳಗೊಂಡಿರುತ್ತದೆ. ಸಾಕಷ್ಟು ಸಂಖ್ಯೆಯ ಜನರು ನಿರ್ದಿಷ್ಟ ಜನಾಂಗೀಯ ಲಕ್ಷಣಗಳು, ರಾಷ್ಟ್ರೀಯತೆ, ಧರ್ಮ, ಭಾಷೆ ಅಥವಾ ಸಾಂಸ್ಕೃತಿಕ ಪರಂಪರೆಯನ್ನು ಹಂಚಿಕೊಂಡಾಗ ಜನಾಂಗೀಯ ಸಮೂಹವೊಂದು ನಿರ್ಮಾಣವಾಗುತ್ತದೆ. ಇಂದಿನ ಭಾರತೀಯ ಜನಸಮೂಹವು ವಿವಿಧ ಜನಾಂಗಗಳ ಸಮ್ಮಿಶ್ರಣವಾಗಿದೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.

**Translate the following paragraph from English to Kannada.**

**Secularism has a broad range of meaning. While its definition as the separation of religion from civic affairs and the state is the most common, it may connote anticlericalism, atheism, naturalism, banishment of religious symbols from the public sphere and much more.**

**A philosophy, secularism seeks to interpret life on principles taken solely from the material world, without recourse to religion. It shifts the focus from religion towards "temporal" and material concerns.**

**In political terms, secularism is the principle of the separation of government institutions and persons mandated to represent the state from religious institutions and religious dignitaries. There are distinct traditions of secularism in the west, like the French and Anglo-American models, and beyond, as in India, Where the emphasis is more on tolerance for all religions rather than separation.**

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

20 ನೇಯ ಶತಮಾನದ ಮೂರನೆಯ ದಶಕದ ವರ್ಷಗಳಲ್ಲಿ ಸ್ವಾತಂತ್ರ್ಯದ ಹೋರಾಟ ಅನೇಕ ಹೆಜ್ಜೆಗಳನ್ನು ಮುಂದಿಟ್ಟಿತು. ಈ ದಶಕವು ಪ್ರಾರಂಭವಾದದ್ದು ಎರಡನೆಯ ಅಸಹಕಾರ ಚಳುವಳಿಯಿಂದ; ಎರಡನೆಯ ಮಹಾಯುದ್ಧ ಮತ್ತು ಭಾರತೀಯನನ್ನುಅವನ ಸಮ್ಮತಿಯಿಲ್ಲದೆಯೇ ಅದರಲ್ಲಿ ತೊಡಗಿಸಿದುದರ ವಿರುದ್ಧ ಪ್ರತಿಭಟನೆ ಸೂಚಿಸಲು ಪ್ರಾಂತಗಳಲ್ಲಿ ಕಾಂಗ್ರೇಸ್ ರಾಜೀನಾಮೆ ಕೊಟ್ಟಿದ್ದರಿಂದ ಅದು ಮುಗಿಯಿತು. ಆದರೆ ಈ ಹತ್ತು ವರ್ಷಗಳಲ್ಲಿ ರಾಷ್ಟ್ರೀಯ ಹೋರಾಟವು ಸಾಗಿದ ನಡೆಯನ್ನು ಗುರುತಿಸುವುದಕ್ಕೆ ಮುಂಚಿತವಾಗಿ ಎರಡನೆಯ ದಶಕದ ಕೊನೆಗೆ ಮತ್ತು ಮೂರನೆಯ ದಶಕದ ಮೊದಲಿಗೆ ಕ್ರಾಂತಿಕಾರೀ ಭಯೋತ್ಪಾದಕ ಹಿಂಸಾಕೃತ್ಯಗಳು ಮತ್ತೆ ಮೇಲೆದ್ದುದ್ದನ್ನು ನಾವು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

ಈ ಅವಧಿಯಲ್ಲೇ ಕಾರ್ಮಿಕ ಚಳುವಳಿಯೂ ಶಕ್ತಿ ತುಂಬಿಕೊಂಡಿತು ಮತ್ತು ದೇಶದ ರಾಜಕೀಯ ಚಿಂತನೆಯಲ್ಲಿ ಸಮಾಜವಾದೀ ಮತ್ತು ಕಮ್ಯೂನಿಸ್ಟ್‌ಭಾವನೆಗಳು ಒಂದು ದೃಡವಾದ ಸ್ಥಾನ ಪಡೆದವು. ಇವೆಲ್ಲವೂ ಸೇರಿ ಮೂರನೆಯ ದಶಕದ ರಾಜಕೀಯ ಬೆಳವಣಿಗೆಗಳ ಮೇಲೆ ಪ್ರಭಾವ ಬೀರಿದವು. 1928 ರಲ್ಲಿಯೇ ಭಾರತದಲ್ಲಿ 203 ಮುಷ್ಕರಗಳು ನಡೆದವು. ಅವುಗಳಲ್ಲಿ 5,05,000 ಜನ ಕಾರ್ಮಿಕರು ಭಾಗವಹಿಸಿದ್ದರು. ಮುಂಬಯಿ ಮತ್ತು ದಕ್ಷಿಣ ಮಹಾರಾಷ್ಟ್ರಗಳ ಹತ್ತಿಬಟ್ಟೆ ಉದ್ಯಮದ ಗಿರಣಿ ಕಾಮಗಾರ್ ಯೂನಿಯನ್‌ಗಳಲ್ಲಿ ಸದಸ್ಯರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿತ್ತು. ದಕ್ಷಿಣ ಭಾರತ, ಮದರಾಸು ಮತ್ತು ದಕ್ಷಿಣ ಮರಾಠಾ ರೈಲ್ವೆಗಳ ಕೆಲಸಗಾರರು ಕ್ರಾಂತಿಗೆ ಕರೆಕೊಡುವ ಸಂಘಗಳನ್ನು ಪ್ರಾರಂಭಿಸಿದ್ದರು. ಕೀರ್ತಿ, ಮಜ್ದೂರ್, ಕಿಸಾನ್, ಸ್ಪಾರ್ಕ್ ಮತ್ತು ಕ್ರಾಂತಿ ಮೊದಲಾದ ಕಮ್ಯೂನಿಸ್ಟ್ ವರ್ತಮಾನ ಪತ್ರಿಕೆಗಳು ನಗರಗಳಲ್ಲಿ ಹರಡಿದವರು. ಯುವಕ ಸಂಘಗಳು ಸ್ಥಾಪಿತವಾಗಿದ್ದವು. ಕೆಳ ಮಧ್ಯಮ ವರ್ಗದ ವಿದ್ಯಾರ್ಥಿಗಳಲ್ಲಿ ಅವು ತುಂಬ ಜನಪ್ರಿಯವಾಗಿದ್ದವು. ಮೇಲು ಮಧ್ಯಮ ವರ್ಗದವರನ್ನು ಮತ್ತು ಕಾಂಗ್ರೆಸ್ಸಿನ ಸ್ವರಾಜ್ಯವಾದೀ ನಾಯಕರನ್ನು ಕಂಡರೆ ಅವರಿಗೆ ಸ್ವಲ್ಪ ಸಹಾನುಭೂತಿ. ಆದರೆ ಅವರೇನೂ ಸ್ವತಂತ್ರವಾಗಿ ವ್ಯವಸ್ಥಿತ ರೀತಿಯಲ್ಲಿ ಸಮಾಜವಾದಕ್ಕಾಗಿ ಹೋರಾಟ ನಡೆಸಲಿಲ್ಲ, ಭಾರರೀ ಪ್ರಮಾಣದ ನಗರಗಳ ಕಾರ್ಮಿಕ ವರ್ಗವನ್ನು ಒಳಗೊಂಡಂತೆ ಕಾರ್ಮಿಕ ವರ್ಗವನ್ನು ಒಳಗೊಂಡಿತು.